**ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾದೀಶರು, ಹಾಗೂ ಜೆ ಎಮ್ ಎಫ್ ಸಿ ನ್ಯಾಯಾಲಯ ಮುಧೋಳ**

## ಸಿ.ಸಿ ನಂ.376/2024

1. **ತುಕಾರಮ ತಂ.ಕರಿಯಪ್ಪ ಡಾಲಿ**

....ಫಿರ್ಯಾಧಿದಾರರು

ವಿರುದ್ಧ

1. **ಬಸವರಾಜ ತಂ.ಯಲ್ಲಪ್ಪ ಕಗಲಗೊಂಬ**

.....ಆರೋಪಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂಃ 313 ರ ಅಡಿಯಲ್ಲಿ  ಆರೋಪಿಯ  ಹೇಳಿಕೆ**

ಪ್ರಶ್ನೆ 1 ಃ- ಈ ಕೇಸಿನಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷಿಯನ್ನು ಕೇಳಿ ತಿಳಿದುಕೊಂಡಿರುವೀರಾ ?

ಉತ್ತರ ಃ- ತಿಳಿದುಕೊಂಡಿದ್ದೇನೆ.

ಪ್ರಶ್ನೆ 2 ಃ- ಫಿರ್ಯಧಿದಾರರು ತಮ್ಮ ಸಾಕ್ಷ್ಯದಲ್ಲಿ ನೀವು ಮತ್ತು ಪಿರ್ಯಾದಿಯವರು ಒಬ್ಬರಿಗೊಬ್ಬರು ಪರಿಚಯಸ್ಥರಿದ್ದು, ಆರೋಪಿಯವರಾದ ನೀವು ಪಾಪಂಚಿಕ ಅಡಚಣೆ ಸಲುವಾಗಿ  ಪಿರ್ಯಾದಿಯವರ ಕಡೆಯಿಂದ ರೂ.2,50,000/- ಗಳನ್ನು 2023 ರ ಮಾರ್ಚ ತಿಂಳ ಮೊದಲನೇ ವಾರದಲ್ಲಿ ಪಡೆದಿರುತ್ತೀರಿ ಆದರೆ ಒಪ್ಪಿಕೊಂಡರೆ ನೀವು ಹಣ ಮರುಪಾವತಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ- ಸುಳ್ಳು

ಪ್ರಶ್ನೆ 3 ಃ- ಪಿ.ಡಬ್ಲೂ.1 ಇವರು ಮುಂದುವರೆದು ಸದರಿ ಹಣವನ್ನು ಮರುಪಾವತಿ ಮಾಡುವಂತೆ ಸುಮಾರು ಬಾರಿ ನಿಮಗೆ ಕೇಳಿದ್ದರು, ಸದರಿ ಹಣದ ಮರುಪಾವತಿಗಾಗಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆ-ಭಂಟನೂರ ಇದರ ಚೆಕ ನಂ.007233 ದಿಃ01.03.2024 ರೂ.2,500,000/- ಗಳನ್ನು ನೀಡಿದ್ದು ನೀವು ಕೊಟ್ಟಂತಹ ಚೆಕ್ಕನ್ನು ಕೆನರಾ ಬ್ಯಾಂಕ ಲಿ. ಶಾಖೆ-ಮುಧೋಳಕ್ಕೆ ನಗಧೀಕರಣಗೊಳಿಸಲು ಜಮಾ ಮಾಡಿದಾಗ ನೀವು ಕೊಟ್ಟಿರುವ ಚೆಕ್ಕು **"Drawers Signature Differs"** ಎಂದು ದಿಃ02.03.2024 ರಂದು ವಾಪಸ್ಸು ಆಗಿರುತ್ತದೆ ಎಂದು ಅವರ ಬ್ಯಾಂಕಿನವರು ಹಿಂಬರಹವನ್ನು ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ- ಸುಳ್ಳು

ಪ್ರಶ್ನೆ 4 ಃ- ಫಿರ್ಯಾಧಿದಾರರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ ನೀವು ಕೊಟ್ಟಂತಹ ಚೆಕ್ಕು ವಾಪಸ್ಸು ಅದ ನಂತರ ದಿಃ 21-03-2024 ರಂದು ಅವರ ವಕೀಲರ ಮುಖಾಂತರ  ಸದರಿ ಚೆಕ್ಕಿನ ಮೊತ್ತವನ್ನು ಪಾವತಿ ಮಾಡಬೇಕೆಂದು ಕೇಳಿ ನಿಮಗೆ ಒಂದು ನೋಟೀಸು ಕಳುಹಿಸಿದ್ದರು ಸದರಿ ನೋಟಿಸ್ ದಿಃ26.03.2024 ಜಾರಿಯಾಗಿದ್ದರು ಸಹ ನೀವು ಅವರಿಗೆ ಚೆಕ್ಕಿನ ಮೊತ್ತವನ್ನು ಕೊಟ್ಟಿರುವುದಿಲ್ಲಾ ಎಂದು ಸಾಕ್ಷಿ ನುಡಿಯುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ ಃ- ಸುಳ್ಳು

ಪ್ರಶ್ನೆ 5 ಃ- ಫಿರ್ಯಾಧಿದಾರರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ ನೀವು ನೀಡಿದ ಚೆಕ್ಕು ಹಾಜರಪಡಿಸಿದ್ದು ಅದನ್ನು ನಿಪಿ-1 ಎಂದು, ಚೆಕ್ಕಿನ ಮೇಲೆ ಇರುವ ನಿಮ್ಮ ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕ ಹಿಂಬರಹವನ್ನು ನಿಪಿ-2 ಎಂದು, ವಕೀಲರ ಮೂಲಕ ನಿಮಗೆ ನೀಡಿದ ನೋಟಿಸನ್ನು ಹಾಜರಪಡಿಸಿದ್ದು ಅದನ್ನು ನಿಪಿ-3 ಎಂದು, ಅಂಚೆ ರಸೀದಿಯನ್ನು ನಿಪಿ-4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-5 ಎಂದು ಗುರುತಿಸಿಕೊಂಡಿದ್ದು, ಅದಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ ಃ- ಸುಳ್ಳು

ಪ್ರಶ್ನೆ 6 ಃ- ಈ ಪ್ರಕರಣದಲ್ಲಿ ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ ಃ- ಇಲ್ಲ

ಪ್ರಶ್ನೆ 7 ಃ- ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವೀರಾ ?

ಉತ್ತರ ಃ- ಇದೆ

(ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ತಯಾರಿಸಿ ಆರೋಪಿಯು ತಿಳಿಯುವ ಭಾಷಯಲ್ಲಿ ಓದಿ ಹೇಳಿ ಅತನ ಸಹಿ ಪಡೆಯಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ)

ಸಹಿ/-

**ದಿನಾಂಕ ಃ 24-09-2024** **ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ**

**ಸ್ಥಳ ಃ ಮುಧೋಳ** **ಜೆ ಎಂ ಎಫ್ ಸಿ ಮುಧೋಳ**